

## ಇಲ್ಲಿಯವರೆಗೆ

ದಮಯಂತಿಯನ್ನು ದೇವೇಂದ್ರ ವರಿಸುವುದಾಗಿ ಹೇಳಿದಾಗ ನಳನ ಮನಸ್ಸು ಅಲ್ಲೋಲಕಲ್ಲೋಲವಾಯಿತು. ದಮಯಂತಿ ತನ್ನನ್ನೇ ಪತಿಯೆಂದು ಭಾವಿಸಿರುವಾಗ ದೇವೇಂದ್ರ ಹೀಗೆ ಹೇಳುತ್ತಿದ್ದಾರಲ್ಲಾ ಎಂದು ನಳ ಚಿಂತಿತನಾದನು. ಅರಮನೆಯಲ್ಲಿ ದಮಯಂತಿ ಗೆಳತಿಯರ ಜತೆಯಲ್ಲಿ ನಳನ ಕಥೆಯನ್ನು ಕೇಳುತ್ತಿರುತ್ತಾಳೆ. ಸುರವನಿತೆಯರು ದೇವೇಂದ್ರನನ್ನು ಒಲಿಯಬೇಕಾಗಿ ಹೇಳಿದಾಗ 'ನಾನು ಈಗಾಗಲೇ ಒಬ್ಬನಿಗೆ ಮನಸ್ಸು ಕೊಟ್ಟಾಗಿದೆ. ಅದನ್ನು ಹಿಂಪಡೆಯಲು ವಿಷ್ಣುವಿಗೂ ಸಾಧ್ಯವಿಲ್ಲ, ದೇವೇಂದ್ರನಿಗೆ ದೇವಾಂಗನೆಯರಿರುವಾಗ ನಾನು ಯಾಕೆ ಬೇಕು? ಎಂದು ಪ್ರಶ್ನಿಸುತ್ತಾಳೆ. ಆಗ ಆ ಸತಿಸುತೆಯರು ವಾಪಸಾಗುತ್ತಾರೆ. ಭೀಮರಾಜ ಓಡೋಡಿ ಮಗಳ ಬಳಿ ಬರುತ್ತಾನೆ. ಸರಸ್ವತಿಯನ್ನು ನೆನೆನೆನೆದು ಪೂಜಿಸುತ್ತಾನೆ. ಅದಾಗಿ ದಮಯಂತಿ ಹೂಹಾರವನ್ನು ನಳನ ಕೊರಳಿಗೆ ಹಾಕುತ್ತಾಳೆ. ಭೀಮನೃಪ ಮುನಿಗಳನ್ನು ಕರೆಸಿ ಅಕ್ಷತೆ ಹಾಕಿಸಿದನು.

ಸಾಮಂತರಾಜರು, ಜಟ್ಟಿಗಳು, ಗಾಯಕರು ಸಾಲು ಸಾಲಾಗಿ ನಿಂತು ಕಂಬನಿ ಮಿಡಿದರು. ನಗರದ ಬಾಲೆಯರು ಬಾಲಕರು ಪುರಜನರೆಲ್ಲ ರಾಜನ ಅರಸಿ ದಮಯಂತಿಯನ್ನು ಕಂಡು ಗೋಳಿಡುತ್ತ ದುಃಖಿಸಿದರು.

ರಾಣಿ ದಮಯಂತಿಯು ಮುಂದಿನದನ್ನು ಆಲೋಚಿಸಿ, ತನ್ನ ಮಕ್ಕಳನ್ನು ರಥದಲ್ಲಿ ಕುಳ್ಳಿರಿಸಿದಳು. ಅವರನ್ನು ಆಪ್ತರೊಡನೆ ತನ್ನ ತವರು ಮನೆ ವಿದರ್ಭಕ್ಕೆ ಕಳುಹಿಸಿದಳು.

### ದಮಯಂತಿ ಸತ್ಯಜ್ಞಾನಿಯಲ್ಲಾ ಸತಿಯರಿಗೆ ಗುರು

ಧರ್ಮರಾಜನೇ ಕೇಳು. ಇಡೀ ನಗರದ ಜನರೆಲ್ಲ ಗೋಳಿಟ್ಟು ರೋದಿಸುತ್ತಿರಲು ಸತಿ ದಮಯಂತಿಯು ಇನ್ನೊಂದು ಯೋಚಿಸದೇ ಸತ್ಯ ಹಾಗೂ ಶುದ್ಧ ಭಾವದಲ್ಲಿ ಪತಿಯನ್ನು ಹಿಂಬಾಲಿಸಿದಳು. ದಮಯಂತಿಯು ಸತ್ಯವನ್ನು ತಿಳಿದವಳು ಮತ್ತು ಪತಿವ್ರತಾಗುಣದಲ್ಲಿ ಈ ಲೋಕದ ಸ್ತ್ರೀಯರಿಗೆಲ್ಲಾ ಗುರುವಾದವಳು. ಆ ಘನಸತಿಯು ಮೌನವಾಗಿ ಪತಿಯ ಚರಣ ಕಮಲಗಳನ್ನೆ ಮನದಲ್ಲಿ ಧ್ಯಾನಿಸಿದಳು. ಇದು ಭಗವಂತನ ಆಜ್ಞೆ ಎಂದುಕೊಂಡು ಅರಣ್ಯಕ್ಕೆ ನಡೆದಳು.

* * *

### ನಳ ದಮಯಂತಿಯರ ವಿಧಿ

ಕುಂತೀ ತನಯನೇ ಕೇಳು. ನಗರವನ್ನು ಬಿಟ್ಟ ನಳ ಮತ್ತು ದಮಯಂತಿ ಪ್ರಯಾಣ ಮಾಡುತ್ತ ಹಲವು ಯೋಜನಗಳ (ನಾಲ್ಕು ಹರದಾರಿ, ಸುಮಾರು 12 ಮೈಲು) ದೂರ ಸಾಗಿದರು. ಅವರ ವಿಧಿಯನ್ನು ಏನೆಂದು ಹೇಳುವುದು? ಗಂಟಲುಗಳು ಒಣಗಿದವು. ದಮಯಂತಿಯ ಕಾಲೊಡೆದು ಸುರಿದ ರಕ್ತದಿಂದ ದಾರಿ ಕೆಸರಾಯಿತು. ಎಳೆ ಬಾಳೆಯ ಸುಳಿಯು ಬೆಂಕಿಯ ಝಳಕ್ಕೆ ಬೆಂದಂತೆ ತುಂಬಾ ಬಳಲಿದ ಅವಳನ್ನು ನೋಡಿ ನಳನು ಮರುಗಿದನು. ಮನೋಹರವಾದ ಬಂಗಾರದ ತೂಗು–ಮಂಚದಲ್ಲಿ ಹೊಳೆವ ಹಾಸಿಗೆಯ ಮೇಲೆ ಮಲಗುವ ಲಲನೆಗೆ ಈ ವಿಧಿ ಬಂದಿತೇ ಎಂದು ನಿಟ್ಟುಸಿರು ಬಿಟ್ಟನು.

### ವಿಧಿ ಬರೆದ ಬರೆಹವ ತಪ್ಪಿಸಲು ಹರಿಹರ ವಿರಿಂಚಾದಿಗಳಿಗಳವೇ?

ಅದನ್ನು ಗಮನಿಸಿದ ದಮಯಂತಿಯು ನುಡಿದಳು;

'ಅರಸ, ಸಂಕಟಪಡುವೆ ಏಕೆ? ವಿಧಿ ಬರೆದ ಬರೆಹವನ್ನು ತಪ್ಪಿಸಲು ಹರಿಹರ ಬ್ರಹ್ಮಾದಿಗಳಿಗೂ ಸಾಧ್ಯವಿಲ್ಲ. ಹಾಗಿರುವಾಗ ನಮ್ಮ ಪಾಡೇನು?'

'ಸಮೃದ್ಧತೆಯನ್ನು ವಿಧಿ ಸೈರಿದೆ ಹೋಯಿತು.'

'ಹಾಗೆನ್ನ ಬೇಡ ಎನ್ನರಸ. ಸಿರಿ ಅಳಿಯುತ್ತದೆ. ಮರುಕ್ಷಣ ತುಂಬಿ ಗೋಚರಿಸುತ್ತದೆ. ಅದು ಶಾಶ್ವತವಲ್ಲ. ಇದು ಗೊತ್ತಿದ್ದು ನೀನು ನೋಯುವುದೇಕೆ?'

ಅವಳ ಸಮಾಧಾನದ ನುಡಿ ಆಲಿಸುತ್ತ, ಮನದಲ್ಲಿ ರೋದಿಸಿದನು. ಘನ ಘೋರ ಅಡವಿಯಲ್ಲಿ ಹಾಗೆ ಸಾಗಿ ಬರುತ್ತಿರಲು ಜಗನ್ಮೋಹನವಾದ ಪಕ್ಷಿಗಳು ಕಂಡವು. ಅವು ಭೂಮಿಗೆ ಇಳಿಯಲು ಅಪೇಕ್ಷಿಸುತ್ತಿರುವುದನ್ನು ನಳನು ನೋಡಿದನು. ಅವುಗಳನ್ನು ಹಿಡಿಯಲು ತನ್ನ ಮೈ ಮೇಲಿನ ವಸ್ತ್ರವನ್ನು ಬೀಸಿದನು. ಅವು ಆ ವಸ್ತ್ರವನ್ನು ಎತ್ತಿಕೊಂಡು ಆಕಾಶಕ್ಕೆ ಹಾರಿದವು!

ಅದನ್ನು ಕಂಡು ಅವನು ಆಶ್ಚರ್ಯ ಪಟ್ಟನು. ಮೂಗಿನ ಮೇಲೆ ಬೆರಳಿಟ್ಟು ನಸುನಗುತ್ತ ನಿಂತನು. ಆಗ ಆ ಮನೋಹರ ಸೌಂದರ್ಯದ ಜೋಡಿ ಹಕ್ಕಿಗಳು ಬಂದು 'ನಿನ್ನ ನಿರಂತರ ರಾಜ್ಯಭೋಗವನ್ನು ಅಪಹರಿಸಿದವರು ನಾವು. ಇದನ್ನು ತಿಳಿದಿರು' ಎಂದು ಹೇಳಿ ಮಾಯವಾದವು.

### ಸೀರೆಯ ಸೆರಗ ಹರಿದಿತ್ತಳು ನೃಪಾಲಗೆ

ಧರಣಿ ಪತಿ ಧರ್ಮರಾಯನೇ ಕೇಳು. ನಳನಿಗೆ ಕಲಿಪುರುಷನ ಮಾಯೆಯ ಬಗ್ಗೆ ಏನೂ ತಿಳಿಯದು. ಅವನ ಮನಸ್ಸು ತಳಮಳಗೊಂಡು ಮಂಕು ಬಡಿದಂತಾಗಿ ಬತ್ತಲೆ ನಿಂತಿದ್ದನು! ಅದನ್ನು ಕಂಡ ಸತಿ ದಮಯಂತಿಯು ಸೀರೆಯ ಸೆರಗನ್ನು ಹರಿದು ರಾಜನಿಗೆ ನೀಡಿದಳು! ಆಗ ತನ್ನ ಮೈಮೇಲೆ ವಸ್ತ್ರವಿಲ್ಲದ್ದು ಗೊತ್ತಾಗಿ ಶಿರಬಾಗಿಸಿದನು. ನಾಚಿ ನಿಟ್ಟುಸಿರುಬಿಡುತ್ತ ಹೇಳಿದನು:

'ಭೂಲೋಕದ ರಾಜರಿಗೆ ನಿಷಧ ಚಕ್ರವರ್ತಿಯ ಅರಮನೆಯ ಬಾಗಿಲಿನ ಪ್ರವೇಶ ಸಿಗುವುದೇ ಪುಣ್ಯ ಎನ್ನುವ ರೀತಿ ಮೆರೆದ ರಾಜ್ಯ ವೈಭೋಗ ನಮ್ಮದು. ಅದು ಇಲ್ಲವಾಯಿತು. ಸಮಸ್ತ ರಾಜ್ಯದ ಸಿರಿಯಿಂದ ವಂಚಿತನಾಗಿ ಪತ್ನಿಯ ಸೀರೆ ಉಡುವಂತಾಯಿತು. ಹರ ಹರ! ಮಹಾದೇವ!'

'ಆ ಸೀರೆ ನೀವು ನೀಡಿದ್ದಲ್ಲವೇ?'

'ಓ ಪ್ರಿಯೆ, ಭೂಮಿಯ ಸಂಪತ್ತಿನ ಅಷ್ಟ ಭೋಗವನ್ನು ಕಳೆದುಕೊಂಡೆ. ನನ್ನ ಮಕ್ಕಳನ್ನು ಮಿತ್ರರನ್ನು ತೊರೆದೆ. ನಂಬಿದ ಸತಿಯನ್ನು ಘೋರಾರಣ್ಯದ ಮಧ್ಯದಲ್ಲಿ ಅತಿಯಾಗಿ ಬಳಲಿಸಿ ನೋಯಿಸಿದೆ. ಮನದನ್ನೆ, ನನ್ನಂತಹ ಪಾಪಿಗಳು ಯಾರೂ ಇಲ್ಲ. ನನ್ನನ್ನು ಬಿಟ್ಟು ನಿನ್ನ ತಂದೆಯ ಮನೆಗೆ ಹೋಗು.'

ತನ್ನ ಪ್ರಿಯ ನಲ್ಲನ ನುಡಿ ಕೇಳಿ ದಮಯಂತಿ ಕೋಪಗೊಂಡು ದುಃಖಿಸುತ್ತ,

'ನೀವು ಹೀಗೆ ಮುನಿದು ಮಾತಾಡಿದರೆ ನನಗಿನ್ನಾರು ಗತಿ? ಪ್ರತಿದಿನವೂ ನಿಮ್ಮ ಪಾದ ಪದ್ಮಗಳನ್ನು ಪೂಜಿಸುವುದನ್ನು ತೊರೆದು ನನ್ನ ತನುವಿರದು' ಎಂದು ಹೇಳಿ ಕಣ್ಣೀರನ್ನು ಒರೆಸಿಕೊಳ್ಳುತ್ತ ಮತ್ತೆ ಮಾತು ಮುಂದುವರೆಸಿ,

'ನೆರಳು ತನುವಿನ ಬಳಿಯೇ ಚಲಿಸುತ್ತದೆ ಹೊರತು ಬೇರೆಯಾಗಿ ಅಲ್ಲ. ನಿಮ್ಮ ಪಾದದ ನೆರಳಿನಲ್ಲಿ ನಾನಿರುವೆ. ನನಗೆ ಈ ಅಡವಿಯೇ ಅರಮನೆ' ಎಂದು ನುಡಿದು ಬಾಗಿ ಪತಿಯ ಪಾದಗಳಿಗೆ ನಮಸ್ಕರಿಸಿದಳು.

ತನ್ನ ಕಣ್ಣೀರನ್ನು ಒರೆಸಿಕೊಳ್ಳುವಾಗ ಕೈ ಮೇಲೆ ಹನಿದ ನಳನ ಕಂಬನಿ ನೋಡಿ ಕತ್ತೆತ್ತಿ 'ಇದು ಪೂರ್ವಜನ್ಮದ ಕರ್ಮಫಲ. ಚಿಂತಿಸಿ ಫಲವೇನು? ಇಂದಿನಿಂದ ನಿರ್ಮಲ ಚಿತ್ತದಲ್ಲಿ ನಿಮ್ಮೊಡನೆ ಕಾನನದಲ್ಲಿ ಸಂಚರಿಸುತ್ತೇನೆ' ಎಂದು ಹೇಳಿ ನಿಂತಳು. ಅವಳನ್ನು ಸೆಳೆದುಕೊಂಡು ಮುಖವೆತ್ತಿ ನೋಡುತ್ತ, 'ಶೋಕವೇಕೆ ತರುಣಿ? ಬಾ' ಎಂದು ತೋಳುಗಳಿಗೆ ತೋಳಬಂದಿ, ಕೆನ್ನೆತುಂಬ ಮುತ್ತು ನೀಡಿ ಬಿಗಿಯಾಗಿ ಅಪ್ಪಿಕೊಂಡನು.

ಕಂಬನಿಯನ್ನು ಸೆರಗಿನಿಂದ ಒರಸಿ ಜಾಗ್ರತೆಯಾಗಿ ಕುಳಿತು, ತನ್ನ ತೊಡೆಯೊಳಗೆ ಕುಳ್ಳಿರಿಸಿಕೊಂಡನು. ಅವಳ ಕಣ್ಣ ಕನ್ನಡಿಯಲ್ಲಿ ತನ್ನ ಪ್ರತಿಬಿಂಬ ತುಂಬಿಕೊಂಡು, 'ಹುಚ್ಚಿ! ದುಗುಡವನ್ನು ತೊರೆ' ಎಂದು ಹೇಳುತ್ತ ಅಪ್ಪಿ ಮುದ್ದಾಡಿದನು.